ಆ) ಹಾಗಿದ್ದಲ್ಲಿ ಕಾರಣಗಳೇನು?

ಇ) ರಾಜ್ಯದ ಮಹಾನಗರಪಾಲಿಕೆ ನೌಕರರಿಗೇ ಸದರಿ ಕಾಯ್ದೆಗಳನ್ನು ಅಳವಡಿಸಲು ಮಾಡಿದ ವಿಳಂಬದಿಂದ ಆದ ನಷ್ಟಕ್ಕೆ ಯಾರು ಹೊಣೆಗಾರರು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಕೆ.ಸಿ.ಎಸ್.ಆರ್. ಕಾಯ್ದೆಯನ್ನು ರಾಜ್ಯದ ಮಹಾನಗರಪಾಲಿಕೆ ನೌಕರರಿಗೆ ಅಳವಡಿಸುವ ಬಗ್ಗೆ ಸರಕಾರದ ತೀವ್ರ ಪರಿಷ್ಕರಣೆಯಲ್ಲಿದೆ ಕರಡು ನಿಯಮಗಳನ್ನು ಕೂಡಾ ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದೆ. ರಾಜ್ಯದ ಎಲ್ಲಾ ನಗರಪಾಲಿಕೆಗಳು ತಮ್ಮದೇ ಆದ ನಿಧಿಯ ನಿರ್ವಹಣೆಯ ಕಾರ್ಯ ಭಾರ ಹೊಂದಿರುವುದರಿಂದ ಕೆ. ಎಫ್. ಸಿ. ಅಳವಡಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸ್ವಯಂ ಆರ್ಥಿಕ ನೆರವು ಯೋಜನೆಯಲ್ಲಿ ಪ್ರಾಧಿಕಾರವು ಕಟ್ಟಿರುವ ಎಲ್.ಐ.ಜಿ. ಹಂಚಿಕೆಯಲ್ಲಿ ಪ್ರಾಧಿಕಾರವು ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿರುವುದರ ಬಗ್ಗೆ

೮೨೫(೧೬೮೨) ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸ್ವಯಂ ಆರ್ಥಿಕ ನೆರವು ಯೋಜನೆಯಡಿಯಲ್ಲಿ ಪ್ರಾಧಿಕಾರವು ಕಟ್ಟಿರುವ ಎಲ್.ಐ.ಜಿ., ಎಚ್.ಐ.ಜಿ. ಮನೆಗಳನ್ನು ಅರ್ಜಿದಾರರಿಗೆ ಹಂಚಲಾಗಿದೆಯೇ ಮತ್ತು ಅಂತಹ ಮನೆಗಳನ್ನು ಹಂಚಿಕೆ ಪಡೆದವರಿಂದ ಪ್ರಾಧಿಕಾರವು ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಗುತ್ತಿಗೆ ಕರಾರು ಒಪ್ಪಂದ ಪತ್ರದ ಆಧಾರದ ಮೇಲೆ ಮನೆಗಳನ್ನು ಪಡೆದವರಿಂದ ಕೇ. ೧೦ ರಷ್ಟು ಸ್ಟ್ಯಾಂಪು ಶುಲ್ಕವಾಗಿ ಪಾವತಿ ಮಾಡುವುದು ಹಂಚಿಕೆ ಪಡೆದವರಿಗೆ ಹೊರಲಾರದ ಭಾರವೆಂಬುದನ್ನು ಸರ್ಕಾರ ಒಪ್ಪುವುದೇ?

ಇ) ಮನೆಗಳನ್ನು ಹಂಚಿಕೆ ಪಡೆದವರು ಗುತ್ತಿಗೆ ಕರಾರು ಒಪ್ಪಂದ ಪತ್ರದ ಅವಧಿಯು ಮುಗಿಯುವವರೆಗೆ ಪೂರ್ತಿ ವಾರಸುದಾರರಾಗುವುದಿಲ್ಲವಾದ್ದರಿಂದ, ಪ್ರಾಧಿಕಾರವು ಹೆಚ್ಚುವರಿ ಶುಲ್ಕ ಹಾಗೂ ಸ್ಟ್ಯಾಂಪು ಶುಲ್ಕವನ್ನು ವಸೂಲು ಮಾಡದಂತೆ ಸರ್ಕಾರವು ಆದೇಶ ನೀಡುವುದೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು.

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಸ್ವಯಂ ವಸತಿ ನೆರವು ಯೋಜನೆಯಲ್ಲಿ ಮನೆಗಳನ್ನು ಹಂಚುವ) ನಿಯಮ ೧೯೮೨ ರಂತೆ ಉಪನಿಯಮ ೧೦(೧) ಗುತ್ತಿಗೆ ಕರಾರು ಒಪ್ಪಂದ ಪತ್ರವನ್ನು ಹಂಚಿಕೆ ಪಡೆದವರು ಸೋಂದಣಿ ಮಾಡಿಸಬೇಕಾಗುತ್ತದೆ. ಸ್ಟ್ಯಾಂಪು ಶುಲ್ಕದ ಬಗ್ಗೆ ಕೇ ೧೦ ರಷ್ಟನ್ನು ಸ್ವಯಂ ವಸತಿ ನೆರವು ಯೋಜನೆಯಡಿಯಲ್ಲಿ ಬರುವ ಮನೆಗಳೂ ಸೇರಿದಂತೆ ಎಲ್ಲಾ ಸೋಂದಾಪಣೆಗೂ ಅನ್ವಯಿಸುತ್ತದೆ.

ಇ) ಸರ್ಕಾರದಿಂದ ಯಾವುದೇ ಸಹಾಯ ಧನವನ್ನು ಪಡೆಯದೇ ಲಾಭ ನಷ್ಟವಿಲ್ಲದ ಆಧಾರದ ಮೇಲೆ ಪ್ರಾಧಿಕಾರವು ಕೆಲಸ ನಿರ್ವಹಿಸುತ್ತಿರುವುದರಿಂದ ಹೆಚ್ಚುವರಿ ವೆಚ್ಚವನ್ನು ವಸೂಲಿ ಮಾಡ ಬೇಕಾಗಿರುತ್ತದೆ. ಪ್ರಾಧಿಕಾರವು ಸೋಂದಣಿಯ ಮೇಲೆ ಸ್ಟ್ಯಾಂಪು ಶುಲ್ಕವನ್ನು ವಸೂಲಿ ಮಾಡುವುದಿಲ್ಲ.